415) ಇಂಡಸ್ಟ್ರಿಯಲ್ ಕಮರ್ಷಿಯಲ್ ವರ್ಕರ್ಸ್ ಗೃಹ ನಿರ್ಮಾಣ ಸಹಕಾರ ಸಂಘ ನಿ. ಜಯನಗರ, ಬೆಂಗಳೂರು.

416) ಮೈಸೂರು ಸ್ಮಾಲ್ ಸ್ಕೇಲ್ ಇಂಡಸ್ಟ್ರಿಯಲ್ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು.

417) ಬೆಂಗಳೂರು ಅಡ್ವೋಕೇಟ್ಸ್ ಹೆಚ್ಬಿಸಿಎಸ್ ಲಿ. ಬೆಂಗಳೂರು.

418) ಬಿನ್ನಿ ಆಫೀಸರ್ಸ್ ಹೆಚ್ಬಿಸಿಎಸ್ ಲಿ. ಬೆಂಗಳೂರು.

ನಂದಿ ಬೆಟ್ಟದಲ್ಲಿ ಪ್ರವಾಸಿಗರಿಗೆ ಅಗತ್ಯ ಸೌಲಭ್ಯ

255-ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಿಂದ ಸುಮಾರು 60 ಕಿ.ಮೀ. ದೂರದಲ್ಲಿರುವ ನಂದಿ ಬೆಟ್ಟವನ್ನು ಪ್ರವಾಸಿ ತಾಣವೆಂದು ಸರ್ಕಾರವು ಘೋಷಣೆ ಮಾಡಿರುವುದು ನಿಜವೇ?

ಆ) ಈ ಪ್ರವಾಸಿ ತಾಣದಲ್ಲಿ ಪ್ರವಾಸಿಗಳಿಗೆ ಯಾವ ಯಾವ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಇ) ಈ ಪ್ರವಾಸಿ ತಾಣದ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಲ್ಲಿ ಪ್ರತಿ ವರ್ಷ ಸರ್ಕಾರ ಖರ್ಚು ಮಾಡಿದ ಹಣವೆಷ್ಟು?

ಈ) ಹಣದಲ್ಲಿ ಕಳೆದ ಮೂರು ವರ್ಷಗಳಿಂದ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ವಿವರಗಳೇನು?

ಉ) ನಂದಿ ಬೆಟ್ಟದ ಮೇಲೆ ವಾತಾವರಣ ಕಲುಷಿತಗೊಂಡು ಇಲ್ಲಿರಸ್ತೆಗಳು ಹಾಳಾಗಿ ರಾತ್ರಿ ವೇಳೆಯಲ್ಲಿ ರಸ್ತೆ ದೀಪಗಳು ಸಹ ಇಲ್ಲದೇ ಕಾರ್ಗತ್ತಲು ಆವರಿಸುತ್ತಿರುವುದು ನಿಜವೇ?

ಊ) ಸರ್ಕಾರವು ನಂದಿ ಬೆಟ್ಟ ಅಭಿವೃದ್ಧಿಗಾಗಿ ಒಬ್ಬ ಉನ್ನತ ದರ್ಜೆಯ ಅಧಿಕಾರಿಗಳನ್ನೊಳಗೊಂಡ ಕಛೇರಿಯನ್ನು ನಂದಿ ಬೆಟ್ಟದಲ್ಲಿ ಪ್ರಾರಂಭಿಸುವ ಬಗ್ಗೆ ಪರಿಶೀಲಿಸುವುದೆ?

ಋ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಇಲ್ಲ.

ಆ) ಪ್ರವಾಸಿಗರ ಅನುಕೂಲಕ್ಕಾಗಿ ಊಟ, ವಸತಿ, ವ್ಯವಸ್ಥೆಯ ಜೊತೆಗೆ ಮಕ್ಕಳ ಮನರಂಜನೆಗಾಗಿ ಆಧುನಿಕ ಆಟದ ಸಲಕರಣೆಗಳನ್ನು ಅಳವಡಿಸಲಾಗಿದೆ. ಪ್ರವಾಸಿಗರ ಮನೋಲ್ಲಾಸಕ್ಕೆ ಅಂದವಾದ ಉದ್ಯಾನವನವನ್ನು ನಿರ್ಮಿಸಲಾಗಿದೆ. ಪ್ರವಾಸಿಗರಿಗೆ ಗಿರಿಧಾಮವೈಶಿಷ್ಟ್ಯತೆ ಬಗ್ಗೆ ತೋಟಗಾರಿಕೆ ಇಲಾಖೆಯ ವತಿಯಿಂದ ಮಾಹಿತಿಗಳನ್ನು ನೀಡಲಾಗುತ್ತಿದೆ.

ಕಳೆದ ಮೂರು ವರ್ಷಗಳಲ್ಲಿ ಅಭಿವೃದ್ಧಿ ಕೆಲಸಗಳಿಗೆ ಖರ್ಚು ಮಾಡಿದ ಹಣದ ವಿವರ ಈ ಕೆಳಕಂಡಂತಿದೆ.

(ಲಕ್ಷ ರೂ.ಗಳಲ್ಲಿ)

1991-92	ರೂ. 2.65
1992-93	ರೂ. 7.50
1993-94	ರೂ. 10.00
1994-95	ರೂ. 15.00
ಒಟ್ಟು	ರೂ. 35.15

1) ಗ್ರೀನ್ ಹೌಸ್ ನಿರ್ಮಾಣದ ಹಂತದಲ್ಲಿದೆ.
2) ಮಕ್ಕಳ ಆಟದ ಸಲಕರಣೆಗಳನ್ನು ಅಳವಡಿಸಲಾಗಿದೆ.
3) ವಸತಿ ಗೃಹಗಳನ್ನು ಸುಸಜ್ಜಿತಗೊಳಿಸಲಾಗಿದೆ.
4) ಹಳೆ ಷೆಡ್‌ಗಳನ್ನು ಮತ್ತು ಕಾಟೇಜ್‌ಗಳನ್ನು ಸಹ ದುರಸ್ತಿಗೊಳಿಸಲಾಗಿದೆ.
5) ಕಾಲುದಾರಿಗಳಲ್ಲಿ ಕಲ್ಲು ಚಪ್ಪಡಿಗಳನ್ನು ಅಳವಡಿಸಲಾಗಿದೆ.
6) ಹೊಸ ವಸತಿ ಗೃಹ ನಿರ್ಮಾಣದ ಕಾರ್ಯಗಳನ್ನು ಪ್ರಾರಂಭಿಸಲಾಗಿದೆ.

ಉ) ಇಲ್ಲ

ಊ) ಈಗಾಗಲೇ ಒಬ್ಬ ಕಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ದರ್ಜೆಯ ಅಧಿಕಾರಿಯನ್ನೊಳಗೊಂಡ ಒಂದು ಕಛೇರಿ, ಕಾರ್ಯ ನಿರ್ವಹಿಸುತ್ತಿದೆ.

(ಊ)ನಲ್ಲಿ ನೀಡಿರುವ ಉತ್ತರಗಳಿಂದ ಕಾರಣ ಉದ್ಭವಿಸುವುದಿಲ್ಲ.

ಬೆಳಗಾಂ ತಾಲ್ಲೂಕು ಭಾರಿ ಮಳೆಯಿಂದಾಗಿ ಹಾನಿಗೊಂಡಿರುವುದು.

252 - ಶ್ರೀ ಕೆ.ಸಿ. ಮೊಡಗೇಕರ್ ದೇಸಾಯಿ (ಹಿರೇಬಾಗೆವಾಡಿ) :ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂ ತಾಲ್ಲೂಕಿನ ಬಹುತೇಕ ಭಾಗವು ವಿಪರೀತ ಮಳೆಯಿಂದ ಮತ್ತು ನೆರೆ ಹಾವಳಿಯಿಂದ ಹಾನಿಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?

ಆ) ಹಾಗಿದ್ದಲ್ಲಿ ಪ್ರಸಕ್ತ ಆರ್ಥಿಕ ವರ್ಷದ ಸಾಲ ವಸೂಲಾತಿಯನ್ನು ಸ್ಥಗಿತಗೊಳಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು)

ಅ) ಹೌದು

ಆ) ನಬಾರ್ಡಿನ ಕರಾರುಗಳನ್ನು ಪಾಲಿಸಿದಲ್ಲಿ ಬೆಳೆ ಸಾಲವನ್ನು ಮಧ್ಯಮಾವಧಿ ಸಾಲವಾಗಿ ಪರಿವರ್ತಿಸಲಾಗುವುದು.

ಬಸವಕಲ್ಯಾಣದಲ್ಲಿ ಉಪ ಕಾರಾಗೃಹ

182ಎ - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಕಾರಾಗೃಹ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವ ಕಲ್ಯಾಣದಲ್ಲಿ ಉಪ ಕಾರಾಗೃಹ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆರೋಪಿಗಳನ್ನು ಹುಮ್ನಾಬಾದಿನಲ್ಲಿಟ್ಟು ಪ್ರತಿಯೊಂದು ಬಾರಿಯೂ ನ್ಯಾಯಾಲಯಕ್ಕೆ ಬಸವಕಲ್ಯಾಣಕ್ಕೆ ಕರೆತರುತ್ತಿರುವುದು ನಿಜವೇ?

ಇ) ಹಾಗಿದ್ದರೆ, ಬಸವಕಲ್ಯಾಣದಲ್ಲಿ ಒಂದು ಉಪ ಕಾರಾಗೃಹವನ್ನು ಸ್ಥಾಪಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುತ್ತಿದೆಯೇ?

ಅ) ಹೌದು

ಆ) ಹೌದು

ಇ) ಇದನ್ನು ಪರಿಶೀಲಿಸಲಾಗುವುದು.